

ಶಾಂತಿ–ಸೌಹಾರ್ದಕ್ಕಾಗಿ ಹಂಬಲಿಸುವ ಜಗತ್ತಿಗೆ ಬುದ್ಧ ಕರುಣೆಯೇ ಮೂರ್ತವೆತ್ತಂತೆ ಕಾಣಿಸುತ್ತಾನೆ. ಭೂತಾನ್‌ನ ಥಿಂಪು ನಗರವಂತೂ ಬುದ್ಧನ ಕರುಣೆಯ ಅಕ್ಷಯಪಾತ್ರೆಯಂತೆ ಕಾಣಿಸುತ್ತದೆ. ಅಲ್ಲಿನ ಲಕ್ಷಾಂತರ ಬುದ್ಧರು ಜಗತ್ತಿಗೆಲ್ಲ ನೆಮ್ಮದಿಯನ್ನು ಹಂಚುವ ಶಾಂತಿದೂತರಂತೆ ಕಾಣಿಸುತ್ತಾರೆ.





ಡೋರ್ಡೆನ್ಮಾ ಬುದ್ಧನ ಪೀಠದ ಒಳಗೆ ಪ್ರವೇಶಿಸಿದರೆ, ಎಲ್ಲಿ ನೋಡಿದರೂ ಬುದ್ಧ ಮೂರ್ತಿಗಳೇ ಕಾಣಿಸುತ್ತವೆ. ಬರೋಬ್ಬರಿ 1,25,000 ಮೂರ್ತಿಗಳು! ಎಂಟರಿಂದ ಹನ್ನೆರಡು ಇಂಚಿನ ಎತ್ತರದ ಅವೆಲ್ಲವೂ ಕಂಚಿನ ಲೋಹದಲ್ಲಿ ರೂಪುಗೊಂಡ, ಚೆನ್ನದ ಮೆರುಗಿನಲ್ಲಿ ಮಿಂದ ವಿಗ್ರಹಗಳು. ಥಿಂಪುವಿನಲ್ಲಿ ಜನಸಂಖ್ಯೆಗಿಂತಲೂ ಹೆಚ್ಚಿನ ಸಂಖ್ಯೆಯ ಬುದ್ಧ ಮೂರ್ತಿಗಳಿರುವುದು ವಿಶೇಷ.

ಡೋರ್ಡೆನ್ಮಾ ಸ್ಮಾರಕವು ನೋಡುಗರ ಕಣ್ಣಿಗೆ ರಹಸ್ಯದಂತೆ, ವಿಸ್ಮಯದಂತೆ ಕಾಣಿಸುತ್ತದೆ. ಲಕ್ಷಾಂತರ ಬುದ್ಧರನ್ನು ನಾವು ನೋಡುತ್ತಿದ್ದರೂ, ವಾಸ್ತವದಲ್ಲಿ ನಮಗೆ ಕಾಣಿಸುವುದು ಒಬ್ಬನೇ ಬುದ್ಧ. ಏಕೆಂದರೆ ಪ್ರಮುಖ ಮೂರ್ತಿಯ ಪಡಿಯಚ್ಚುಗಳೇ ಪೀಠದೊಳಗಿನ ಮೂರ್ತಿಗಳೇ ಆಗಿವೆ. ಪೀಠದ ಒಳಗಡೆ ಛಾಯಾಗ್ರಹಣಕ್ಕೆ ಅವಕಾಶವಿಲ್ಲ. ಒಳಗಿನ ಕಲೆಯ ಕುಸುರಿ ಸೊಬಗನ್ನು ನೋಡಿಯೇ ಆನಂದಿಸಬೇಕು.

ಡೋರ್ಡೆನ್ಮಾ ಪ್ರತಿಮೆಯನ್ನು ನಿರ್ಮಿಸಲು ಸುಮಾರು 100 ದಶಲಕ್ಷ ಡಾಲರ್ ವೆಚ್ಚವಾಗಿದೆ. 2006ರಲ್ಲಿ ಆರಂಭವಾದ ಆ ಬೌದ್ಧಾಲಯದ ಕಾಮಗಾರಿ ಸಂಪೂರ್ಣಗೊಂಡಿದ್ದು 2015ರಲ್ಲಿ.

ಥಿಂಪುವಿನ ಬುದ್ಧ ಪ್ರತಿಮೆ ಎರಡು ಭವಿಷ್ಯವಾಣಿಗಳ ಸಾಕಾರ ರೂಪವಾಗಿದೆ. ಮೊದಲನೆಯದು, ಯೋಗಿ ಸೋನಮ್ ಸಾಂಗ್ಪೋ ಮುನ್ಸೂಚನೆ; ಈ ಪ್ರದೇಶದಲ್ಲಿ ಬೌದ್ಧ ಪ್ರತಿಮೆಯನ್ನು, ಇಡೀ ಜಗತ್ತಿಗೆ ಆಶೀರ್ವಾದ, ಶಾಂತಿ ಮತ್ತು ಸಂತೋಷವನ್ನು ನೀಡಲು ನಿರ್ಮಿಸಲಾಗುವುದು ಎನ್ನುವ ವಾಕ್ಕಿನ ಮೂರ್ತರೂಪವಾಗಿದೆ. ಇದಲ್ಲದೆ, ಗುರು ಪದ್ಮಸಂಭವರ ಉಲ್ಲೇಖದ ಸಾಕಾರರೂಪ. ಈ ಪ್ರತಿಮೆಯನ್ನು ಎಂಟನೇ ಶತಮಾನದಲ್ಲಿ 'ಎರಡನೇ ಬುದ್ಧ' ಎಂದು ವ್ಯಾಪಕವಾಗಿ ಉಲ್ಲೇಖಿಸಲಾಗಿರುವ ಗುರು ಪದ್ಮಸಂಭವ ಉಲ್ಲೇಖಿಸಿದ್ದಾರೆಂದು ಹೇಳಲಾಗುತ್ತದೆ. ಈ ಪ್ರತಿಮೆಯು ಮಿನುಗುವ ಶೈಲಿಯಲ್ಲಿ ಎರಡೂ ಭವಿಷ್ಯವಾಣಿಯನ್ನು ಪೂರೈಸುವ ರೀತಿ ನಿರ್ಮಿಸಿದ್ದಾರೆ.

ವಿಶ್ವದ ಅತ್ಯಂತ ನೆಮ್ಮದಿಯ ತಾಣಗಳಲ್ಲೊಂದಾದ ಭೂತಾನಿನಂತಹ ಪ್ರಶಾಂತವಾದ ವಾತಾವರಣದಲ್ಲಿ ಪ್ರವಾಸಿಗರನ್ನು, ಶಾಂತಿಪ್ರಿಯರನ್ನು ಆಕರ್ಷಿಸುತ್ತ ನಿಂತಿರುವ ಬುದ್ಧ ಈ ಹೊತ್ತಿಗೆ ಮನುಕುಲಕ್ಕೆ ಅಗತ್ಯವಾದ ನಿಸರ್ಗ ವಿವೇಕವನ್ನು ಬೋಧಿಸುವಂತೆ ಕಾಣಿಸುತ್ತಾನೆ.